ಶ್ರೀ ಟಿ.ಬಿ. ಜಯಚಂದ್ರ.—ಇದು ತಮ್ಮ ಗಮನಕ್ಕೆ ಬಂದಮೇಲೆ ಇಲ್ಲಿಯವರೆಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಯಾರಯಾರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಶ್ರೀ ಗುರುಲಿಂಗಪ್ಪ ಮತ್ತು ಡಿ. ರಂಗಪ್ಪ, ಇವರುಗಳ ಮೇಲೆ ತಾ ೨೫-೬-೧೯೮೧ರಂದು ಕ್ರಿಮಿನಲ್ ಕೇಸುಗಳನ್ನು ದಾಖಲು ಮಾಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ.—ಇವರುಗಳು ತಮ್ಮ ನೌಕರರಾಗಿದ್ದಾರೆ. ಇಂತಹವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿದ ಮೇಲೆ ಇಲ್ಲಿಯವರೆಗೆ ಸಸ್ಪೆಂಡ್ ಮಾಡದಿರಲು ಕಾರಣವೇನು?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇವರುಗಳು ಸೊಸೈಟಿಯಿಂದ ನೇಮಕವಾಗಿದ್ದಂಥ ಕಾರ್ಯದರ್ಶಿಗಳು. ಇವರುಗಳು ನಮ್ಮ ಸರ್ಕಾರದಿಂದ ನೇರವಾಗಿ ನೇಮಕವಾದಂಥ ಅಧಿಕಾರಿಗಳಲ್ಲ.

ಶ್ರೀ ಟಿ.ಬಿ. ಜಯಚಂದ್ರ.—ಸ್ಲೈ ಕಳೆದ ಮೂರು ವರ್ಷಗಳಿಂದ ಆಡಿಟ್ ಆಗಿಲ್ಲ ಎಂಬುದನ್ನು ಒಪ್ಪಿದ್ದೀರಿ. ಇದನ್ನು ಇನ್ನು ಎಷ್ಟು ವರ್ಷಕ್ಕೆ ಮಾಡಿಸುತ್ತೀರಿ ಮತ್ತು ಯಾವಾಗ ಮಾಡಿಸುತ್ತೀರಿ? ಏಕೆಂದರೆ, ಈ ಮೂರು ವರ್ಷಗಳಲ್ಲಿ ಅಲ್ಲಿ ಸಾಕಷ್ಟು ಹಣದ ದುರುಪಯೋಗವಾಗಿದೆ. ಆದಕಾರಣ ಜಾಗ್ರತೆಯಾಗಿ ಆಡಿಟ್ ಮಾಡಿಸಿ ಹಣ ದುರುಪಯೋಗಪಡಿಸಿಕೊಂಡವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈಗಾಗಲೇ ಆಡಿಟ್ ಆಗಿದೆ. ಆಡಿಟ್ ವರದಿ ಸರ್ಕಾರದ ಕೈಯಲ್ಲಿ ಬಂದನಂತರ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಜೆ.ಎಸ್. ಶಿವಸಂಜಪ್ಪ.—ಈ ಸೊಸೈಟಿಗಳ ವ್ಯವಹಾರ ನೋಡಿದರೆ. ಎಲ್ಲ ಸೊಸೈಟಿಗಳಲ್ಲಿಯೂ ೨೫ ಸಾವಿರದಿಂದ ೫೦ ಸಾವಿರದವರೆಗೆ ಹಣದ ದುರುಪಯೋಗವಾಗಿರುವುದು ಕಂಡುಬರುತ್ತಿದೆ. ಹಣ ದುರುಪಯೋಗವಾಗದಿರುವ ಸೊಸೈಟಿಗಳು ಏನಾದರು ತಮ್ಮ ಗಮನಕ್ಕೆ ಬಂದಿವೆಯೇ ಹೇಗೆ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈ ಬಗ್ಗೆ ತಾವು ಒಂದು ಪ್ರಶ್ನೆ ಹಾಕಿದರೆ ಹಣ ದುರುಪಯೋಗವಾಗದಿರುವ ಸೊಸೈಟಿಗಳು ಯಾವುವು ಎಂಬುದನ್ನು ತಮಗೆ ತಿಳಿಸುತ್ತೇನೆ.

Acquisition of Lands for Irrigation Scheme in Kustagi Taluk

487 SRI M.GANGANNA (Kustagi).—Will the Minister for Transport and Minor Irrigation be pleased to state:-

(a) the extent of land acquired for construction of irrigation tanks at Lingasugur and Kustagi Taluk of Raichur District, the amount of compensation to the respective Landlords.

(b) whether complaints have been received by Government, from those Land Lords who have lost their lands in connection with the construction of tanks, about non-payment of compensation amount so far.

(c) whether Government has taken action or propose to take action on those who are responsible inordinase for delay in payment of Compensation amount to the Land lords.

(d) whether complaints were received by government for non-payment of Minimum wages to the labourers who are engaged in construction of tanks, if so the action proposed to be taken by Govt?

SRI M. M. J. SADYOJATHA (Minister for Transport and Minor Irrigation).—

(a) —

(i) the extend of land acquired for construction of irrigation tanks at Lingasugur is 676.28 acres and the amount of compensation paid Rs. 73,485.00.

(ii) The extent of land acquired for irrigation tanks at Kushtagi Taluk is 601.63 acres and the amount of compensation paid is Rs. 1,82,361.00

(b) Yes, the Revenue authorities were asked to pass awards very often. Efforts are being made for payment of compensation amount to the Land lords as far as possible.

(c) Action is being taken for payment of compensation amount to the Land lords as early as possible.

(d) Minimum wages to the labourers are being paid at the rates fixed in the respective year (as per DSR). No complaints were received in this behalf.

ಶ್ರೀ ಎಂ. ಗಂಗಣ್ಣ.—ಲಿಂಗಸಗೂರು ಮತ್ತು ಕುಷ್ಟಗಿ ತಾಲ್ಲೂಕ್‌ಗಳಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಯು ಭೂಮಾಲೀಕರಿಗೆ ಕೊಟ್ಟ ಪರಿಹಾರದ ಮೊತ್ತವನ್ನು ಇಲ್ಲಿ ತಿಳಿಸಿದ್ದೀರಿ. ತಾವು ಕೊಟ್ಟಿರುವ ಪರಿಹಾರದ ಹಣವನ್ನು ಎಕರೆವಾರು ಲೆಕ್ಕ ಹಾಕಿದರೆ...

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಇಲ್ಲಿ ಉತ್ತರ ಒದಗಿಸಿದ ನಂತರ ನಾವು ಹೆಚ್ಚು ಹಣ ಕೊಟ್ಟಿದ್ದೇವೆ. ಲಿಂಗಸಗೂರು ತಾಲ್ಲೂಕ್‌ನಲ್ಲಿ ೩ ಲಕ್ಷದ ೪೩ ಸಾವಿರದ ೧೦ ರೂ.ಗಳನ್ನು ಇದಕ್ಕಾಗಿ ಕೊಟ್ಟಿದ್ದೇವೆ. ಇದರ ಜೊತೆಗೆ ಬೆಳೆ ಪರಿಹಾರ ಎಂದು ೧೯೨೬ ರೂ.ಗಳನ್ನು ಮತ್ತು ರೆಂಟಲ್ ಕಾಂಪೆನ್ ಸೇಷನ್ ಎಂದು ೧೧.೩೪೭ ರೂ.ಗಳನ್ನು ಕೊಟ್ಟಿದ್ದೇವೆ. ಅದೇರೀತಿ ಕುಷ್ಟಗಿಯಲ್ಲಿ ಪರಿಹಾರ ಧನ ಎಂದು ೧.೮೨.೩೬೧ ರೂ.ಗಳನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಗಂಗಣ್ಣ.—ಡಿ ಪಿ.ಎ.ಪಿ. ಕಾರ್ಯಕ್ರಮದ ಪ್ರಕಾರ ನೀರಾವರಿ ಕೆರೆಗಳ ನಿರ್ಮಾಣಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಲವಾರು ವರ್ಷಗಳಾದ ಮೇಲೂ ಸಹ ಸಂಬಂಧಪಟ್ಟವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಜೊತೆಗೆ ಇಂತಹ ಕೆಲವು ಜಮೀನುಗಳಲ್ಲಿ ಇನ್ನೂ ಕೆರೆಗಳ ಕೆಲಸ ಆಗಿಲ್ಲ. ಈ ಮೊದಲು ನಾನು ಇದೇರೀತಿಯ ಪ್ರಶ್ನೆ ಕೇಳಿದಾಗ ಇದೇರೀತಿಯ ಆಶ್ವಾಸನೆಯನ್ನು ಕೊಡಲಾಗಿತ್ತು. ಆದರೆ ಕಂದಾಯ ಇಲಾಖೆಯವರು ಏನೂ ಕ್ರಮ ತೆಗೆದುಕೊಂಡಿಲ್ಲ ಮಾನ್ಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಅವರು ಕೂಡಲೇ ಈ ಪರಿಹಾರದ ಹಣವನ್ನು ನಿಗದಿ ಮಾಡಲು ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಅವರನ್ನು ನೇಮಕ ಮಾಡಬೇಕು. ಲಿಂಗಸಗೂರು ತಾಲ್ಲೂಕ್‌ದಲ್ಲಿ ಪುಳುವೇಶ್ವರ ಟ್ಯಾಂಕ್, ರಾಮಪ್ಪರ ಭೂಪುರ ಟ್ಯಾಂಕ್, ಭೂನಪ್ಪರ ಟ್ಯಾಂಕ್, ಮಾತನೂರ ಟ್ಯಾಂಕ್, ಬೊಮ್ಮನಾಳ ಟ್ಯಾಂಕ್ ಹಾಗೂ ಕುಷ್ಟಗಿ ತಾಲ್ಲೂಕ್‌ನಲ್ಲಿ ಹನುಮಸಾಗರ ಟ್ಯಾಂಕ್, ಬಾದಾಮಿನಾಳ ಟ್ಯಾಂಕ್, ಹಿರೇನಂದಿಹಾಳ ಟ್ಯಾಂಕ್ ಕಡೂರು ಟ್ಯಾಂಕ್; ಹನುಮಗಿರಿ ಟ್ಯಾಂಕ್ ಮುಂತಾದ ಟ್ಯಾಂಕ್‌ಗಳನ್ನು ಕಟ್ಟಿಸಲು ಸ್ವಾಧೀನ ಪಡಿಸಿಕೊಂಡ ಜಮೀನುಗಳ ಬಗ್ಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ೧೯೭೫ ರಿಂದಲೂ ಇತ್ಯರ್ಥವಾಗಿಲ್ಲ. ಇನ್ನೂ ಎಷ್ಟು ವರ್ಷಗಳು ಇದಕ್ಕೆ ಬೇಕಾಗುತ್ತದೆಂದು ಮಾನ್ಯ ಮಂತ್ರಿಗಳು ನಿಖರವಾಗಿ ಹೇಳುತ್ತಾರೆಯೇ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆದಷ್ಟು ತೀವ್ರವಾಗಿ ಪರಿಹಾರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಮಾನ್ಯ ಸದಸ್ಯರು ಯಾರು ಯಾರಿಗೆ ಪರಿಹಾರಧನ ಮಂಜೂರಿಲ್ಲ ಎಂಬುದನ್ನು ತಿಳಿಸಿದರೆ ಆ ಬಗೆ ನಾವು ವಿವರಗಳನ್ನು ತರಿಸಿಕೊಂಡು ಜಾಗ್ರತೆ ಪರಿಹಾರ ಧನಕೊಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಗಂಗಣ್ಣ.—ಈಗ ಸುಮಾರು ಕೆರೆಗಳಲ್ಲಿ ನೀರು ನಿಂತಿರುವ ಕಾರಣದಿಂದ ಅಲ್ಲಿ ಮೊದಲು ಎಂತಹ ಜಮೀನು ಇತ್ತು, ಎಂತಹ ಬೆಳೆ ಬೆಳೆಯಲಾಗುತ್ತಿತ್ತು ಎಂಬುದು ನಮಗೆ ಗೊತ್ತಿಲ್ಲವೆಂದು ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಅವರು ಹೇಳುತ್ತಿದ್ದಾರೆ. ಇದರಿಂದ ಕೂಡ ಪರಿಹಾರಧನ ಸಿಗುವುದು ಗಗನಕುಸುಮವಾಗಿಬಿಟ್ಟಿದೆ. ಇಂತಹ ಸಂದರ್ಭಗಳಲ್ಲಿ ತಾವು ಯಾವರೀತಿ ತೀರ್ಮಾನ ಕೈಗೊಳ್ಳುತ್ತೀರಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಸಮಗ್ರವಾದ ಲಿಸ್ಟನ್ನು ತರಿಸಿಕೊಂಡು, ಅದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತೇವೆ.

Intermediary Institutions

532 SRI SHEERNALLY CHANDRA SHEKAR (Hosanagar).—Will the Minister for Co-operation be pleased to state.—

(a) whether there is any proposal before the Government to do away with the intermediaries like Apex Bank, D.C.C. Banks etc.,

(b) whether the Government is aware that the farmers in Karnataka has to pay exhorbitant rate of interest due to these intermediary institutions ;

(c) t action Government proposed to take in this regard?

SRI H. C. SRIKANTAIAH (Minister for Co-operation).—

(a) No

(b) No

(c) Does not arise (In view of replies (a) & (b) above).

ಶ್ರೀ ಎಸ್.ಎಂ. ಶೀರ್‌ನಾಳಿ ಚಂದ್ರಶೇಖರ್.—ನನ್ನ ಮೊದಲನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಬಗ್ಗೆ ನನ್ನ ತಕರಾರು ಏನಿಲ್ಲ. ಆದರೆ ನನ್ನ ಎರಡನೇ ಪ್ರಶ್ನೆಗೆ ಕೊಟ್ಟಿರುವ ಉತ್ತರ ನೋಡಿ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ಇದು ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿದೆ. ಮಾನ್ಯ ಮಂತ್ರಿಗಳು ಇದಕ್ಕೂ ಮೊದಲು ಈ ಸಹಕಾರೀ ಸಂಸ್ಥೆಯಲ್ಲಿ ಒಳ್ಳೆಯ ಅನುಭವ ಪಡೆದವರಾಗಿದ್ದಾರೆ ಮತ್ತು ಅಲ್ಲಿಯೇ ತೇಲಾಡಿ ಮುಳುಗಿದವರಾಗಿದ್ದಾರೆ. ಇಂತಹವರು ಈ ರೀತಿಯ ಉತ್ತರ ಕೊಟ್ಟರೆ ಹೇಗೆ? ಇದರಿಂದ ರೈತರಿಗೆ ಬಹಳಷ್ಟು ಅನಾಹುತವಾಗುತ್ತಿದೆ. ಈಗ ಕರ್ನಾಟಕದ ರೈತರು ಮಾರ್ವಾಡಿ ಬಡ್ಡಿಗಿಂತಲೂ ಹೆಚ್ಚು ಬಡ್ಡಿ ಕೊಡುತ್ತಿದ್ದಾರೆ. ಆದರೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟರೆ ಏನು ಹೇಳುವುದು?